# ಚಿಕನ್‌ಕಾರಿ

## ನಾವೀನ್ಯತೆಯ ಹೊಸ ರೂಪಕ

**ಲಖನೌ ಮೂಲದ ಚಿಕನ್‌ಕಾರಿ ಉಡುಗೆ ಬೇಸಿಗೆಗಷ್ಟೇ ಸೀಮಿತ ಎನಿಸಿಕೊಂಡಿದ್ದ ಕಾಲ ಬದಲಾಗಿ ಇದೀಗ ಸರ್ವಕಾಲಕ್ಕೂ ಸೂಕ್ತವೆನಿಸುವ ಎಂಬ್ರಾಯಿಡರಿ ಉಡುಪು ಫ್ಯಾಷನ್ ಜಗತ್ತಿಗೆ ದಾಪುಗಾಲು ಹಾಕಿದೆ. ಮಕ್ಕಳ ಫ್ರಾಕ್‌ನಿಂದ ಹಿಡಿದು ಎಲ್ಲರ ಮೆಚ್ಚಿನ ಸಾಂಪ್ರದಾಯಿಕ ಸೀರೆಯವರೆಗೂ ಚಿಕನ್‌ಕಾರಿ ಉಡುಗೆ ತನ್ನ ಹವಾ ಹಬ್ಬಿಸಿದೆ.**

**■ ಯು. ವೇಣೂರು**

ನೋಟದಲ್ಲಿ ನಾವೀನ್ಯತೆ, ಧರಿಸಲು ಆರಾಮದಾಯಕ, ಜಮಾನದ ಉಡುಪಾದರೂ ಸದಾ ಕಾಯ್ದುಕೊಂಡಿರುವ ಹೊಸತನ, ಬೇಸಿಗೆಗೇ ಸೂಕ್ತ ಎನಿಸಿದರೂ ಇದೀಗ ಎಲ್ಲ ಕಾಲಕ್ಕೂ ಒಗ್ಗುವ ಮತ್ತು ಒಪ್ಪುವಂತಹ 'ಎವರ್‌ಗ್ರೀನ್ ಉಡುಗೆ'ಯಾಗಿ ಯುವತಿಯರ ಮನಸೆಳೆಯುತ್ತಿದೆ ಚಿಕನ್‌ಕಾರಿ ವಿನ್ಯಾಸದ ಉಡುಪು.

ಸಿನಿಮಾ ತಾರೆಯರು, ಸೆಲೆಬ್ರಿಟಿಗಳು ಯಾವಾಗ ಇಷ್ಟಪಟ್ಟು ಚಿಕನ್‌ಕಾರಿ ಸೀರೆ, ಸಲ್ವಾರ್, ಕುರ್ತಾ, ಲೆಹೆಂಗಾಗಳನ್ನು ತೊಡಲು ಆರಂಭಿಸಿದರೋ, ಫ್ಯಾಷನ್‌ಪ್ರಿಯರು ಇದೇ ಉಡುಪಿಗೆ ಮುಗಿಬೀಳತೊಡಗಿದರು. ಅಲ್ಲಿಂದ ಈ ಉಡುಪಿಗೆ ಬೇಡಿಕೆ ಹೆಚ್ಚಲಾರಂಭಿಸಿತು. ಮಹಾರಾಣಿ ನೂರ್‌ಜಹಾನ್ ಕಾಲದ ಉಡುಗೆ ಮನೆಮಾತಾಗಲಾರಂಭಿಸಿತು. ಈಗಂತೂ ಚಿಕನ್‌ಕಾರಿ ಉಡುಪಿನ ಹವಾ ಚಿಕ್ಕಮಕ್ಕಳತ್ತಲೂ ಬೀಸಿದೆ. ಪುಟಾಣಿಗಳ ಚಿಕನ್‌ಕಾರಿ ವಿನ್ಯಾಸದ ಸ್ಕರ್ಟ್ ಹಾಗೂ ಫ್ರಾಕ್‌ಗಳು ಮುದ್ದುಮುದ್ದಾಗಿ ಕಾಣಿಸಲು ಸಹಕಾರಿಯಾಗಿದೆ.

### ಏನಿದು ಚಿಕನ್‌ಕಾರಿ?

ಚಿಕನ್‌ಕಾರಿ ಎಂಬುದು ಬಟ್ಟೆಯ ಮೇಲೆ ಚಿತ್ರಿಸುವ ಸೂಕ್ಷ್ಮ ಕರಕುಶಲ ಕಲೆ. ಇದು ಭಾರತದ ಉಡುಪಿನ ಒಂದು ಕಲಾಪ್ರಕಾರ. ಹ್ಯಾಂಡ್ ಎಂಬ್ರಾಯಿಡರಿಯ ಸೂಕ್ಷ್ಮ ರೂಪವಿದು. ಈ ಕಲಾಪ್ರಕಾರ ಮೊದಲು ಹುಟ್ಟಿದ್ದು ಲಖನೌದಲ್ಲಿ. ಕಲಾತ್ಮಕತೆ ಹಾಗೂ ಸೃಜನಶೀಲತೆಯನ್ನು ಬಹುವಾಗಿ ಬೇಡುವ ಈ ಕಲೆ ಇಂದಿಗೂ ಫ್ಯಾಷನ್ ಪ್ರಪಂಚದಲ್ಲಿ 'ಎವರ್‌ಗ್ರೀನ್ ಹೀರೊ'ನಂತೆ ಮಿಂಚುತ್ತಿದೆ. ಫ್ಯಾಷನ್‌ಪ್ರಿಯರ ಮನತಣಿಸುತ್ತಿದೆ.

ಹಾಗೆ ನೋಡಿದರೆ ಚಿಕನ್‌ಕಾರಿ ಉಡುಗೆ ವಸಂತ ಋತುವಿನಲ್ಲಿ ಹೆಚ್ಚು ಕಂಗೊಳಿಸುತ್ತಿತ್ತು. ಈಗ ಈ ಚಿಕನ್‌ಕಾರಿ ಉಡುಪನ್ನು ಕೆಲವು ಫ್ಯಾಬ್ರಿಕ್ ಕಂಪನಿಗಳು ನವನಾವೀನ್ಯ ವಿನ್ಯಾಸದಲ್ಲಿ ಎಲ್ಲ ಕಾಲಕ್ಕೂ ಸಲ್ಲುವ ಹಾಗೆ ಹೊರತಂದಿವೆ. ಮುಖ್ಯವಾಗಿ ಫ್ಯಾಬ್ ಇಂಡಿಯಾ ತನ್ನ ಹೊಸ ಸಂಗ್ರಹವಾದ 'ದಿ ಸಾಂಗ್ ಆಫ್ ಸ್ಪ್ರಿಂಗ್' ಅನ್ನು ಪರಿಚಯಿಸಿ ಮಹಿಳೆಯರನ್ನು ಸಖತ್ ಆಗಿ ಮಿಂಚುವಂತೆ ಮಾಡಿದೆ. ಇದು ಭಾರತದ ಅತ್ಯಂತ ಸೊಗಸಾದ 'ಹಸ್ತ ಚರ್ಮ' ಕುಶಲತೆಯಿಂದ ತಯಾರಾದ ಉಡುಪು ಎಂದು ಈ ಕಂಪನಿ ಬಿಂಬಿಸಿದೆ. 'ಸಾಂಗ್ ಆಫ್ ಸ್ಪ್ರಿಂಗ್' ಹೆಸರಿನಲ್ಲಿ ಚಿಕನ್‌ಕಾರಿ ಉಡುಪನ್ನು ಎಐ ತಂತ್ರಜ್ಞಾನದ ಸಹಾಯದಿಂದ ಅತ್ಯಾಧುನಿಕವಾಗಿ ರೂಪಿಸಿದೆ. ಈ ನಿಟ್ಟಿನಲ್ಲಿ ಪರಂಪರೆ ಹಾಗೂ ಆಧುನಿಕತೆಯನ್ನು ಸಮಾನವಾಗಿ ಗೌರವಿಸುವ ರೀತಿಯಲ್ಲಿ ಈ ಸಂಗ್ರಹ ಗ್ರಾಹಕರ ಗಮನಸೆಳೆಯುತ್ತಿದೆ. ಇದರೊಂದಿಗೆ ಎಥೀರಿಯಲ್ ದುಪಟ್ಟಾಗಳು, ಆಲಂಕಾರಿಕ ಟ್ಯೂನಿಕ್‌ಗಳು ಚಿಕನ್‌ಕಾರಿಗೆ ಹೊಸ ಜೀವ ತುಂಬುವಂತಿವೆ.

ಚಿಕನ್‌ಕಾರಿ ಉಡುಪಿನ ಇನ್ನೊಂದು

